ಚೆನ್ನಾಗಿತ್ತು' ಎಂದುಕೊಂಡಾಗ ಇದ್ದಕ್ಕಿದ್ದಂತೆ ಶ್ರೀಮಂತನಾದ ಅನುಭವವಾಯಿತು. ನನ್ನ ಎದುರುಗಡೆಯ ಸೀಟಿನ ಮೇಲೆ ಕುಳಿತಿದ್ದ ಖಾದಿಧಾರಿ ವ್ಯಕ್ತಿಯನ್ನು ನೋಡಿದಾಗ 'ಬಹುಶಃ ಈ ವ್ಯಕ್ತಿ ಯಾವುದೋ ಮಂತ್ರಿಯ ಸಂಬಂಧಿಯೇ ಇರಬಹುದು. ನನ್ನನ್ನು ಮಂತ್ರಿಗೆ ಪರಿಚಯಿಸಲೆಂದೇ ಈತ ಇಲ್ಲಿ ಕುಳಿತುಕೊಂಡಿರಬಹುದು' ಎನ್ನಿಸಿತು. ರೈಲು ಚಲಿಸಿತು. ಕೆಲವೇ ನಿಮಿಷಗಳ ನಂತರ ಇನ್ನೊಂದು ನಿಲ್ದಾಣದಲ್ಲಿ ಬಂದು ನಿಂತಿತು. ಬಾಗಿಲಿನಲ್ಲಿ ನೂಕಾಟ ನಡೆಸಿಕೊಂಡು ಒಳಕ್ಕೆ ಬರುತ್ತಿದ್ದ ಪ್ರತಿಯೊಬ್ಬ ವ್ಯಕ್ತಿಯ ಮುಖವನ್ನೂ ಗಮನಿಸತೊಡಗಿದೆ. 'ಯಾವುದಾದರೂ ವ್ಯಕ್ತಿಯ ಮುಖದಲ್ಲಿ ಸ್ನೇಹದ ಲಕ್ಷಣಗಳು ಕಾಣಿಸಬಹುದೇ?' ಎನ್ನುವುದು ನನ್ನ ನಿರೀಕ್ಷೆಯಾಗಿತ್ತು.

ಮುಂದಿನ ಸುಮಾರು ಒಂದೂವರೆ ಗಂಟೆ ಪ್ರಯಾಣದಲ್ಲಿ ಒಂದೆರಡು ನಿಲ್ದಾಣಗಳು ಬಂದುಹೋದವು. ಪ್ರತಿ ಬಾರಿ ನಿಂತಾಗಲೂ 'ಮಿತ್ರನಾಗುವ ಮುಖಲಕ್ಷಣವಿರುವ ಯಾವುದಾದರೂ ವ್ಯಕ್ತಿ ಕಂಪಾರ್ಟ್ಮೆಂಟ್‌ನ ಒಳಗೆ ಬರಬಹುದೇ?' ಎಂದು ಕುತೂಹಲದಿಂದ ನಿರೀಕ್ಷಿಸುತ್ತಿದ್ದೆ. ಆದರೆ ಅಂತಹುದೇನೂ ನಡೆಯಲಿಲ್ಲ. ಅರ್ಥಾತ್ ಅದುವರೆಗೆ ಏನೂ 'ಲಾಭ'ವಾಗಲಿಲ್ಲ. ಬೇಸರಗೊಳ್ಳತೊಡಗಿದ ಮನಸ್ಸಿಗೆ ನಾನೇ ಧೈರ್ಯ ಹೇಳಿದೆ, 'ಇನ್ನೂ ಸುಮಾರು ಆರು ಗಂಟೆಗಳ ಪ್ರಯಾಣ ಬಾಕಿಯಿದೆ. ಅಷ್ಟರೊಳಗೆ ಯಾವಾಗಾದರೂ, ಎಲ್ಲಿಯಾದರೂ, ಏನಾದರೂ 'ಫಲ' ಖಂಡಿತವಾಗಿಯೂ ಸಿಗುತ್ತದೆ. ಈಗಲೇ ನೀನು ನಿರಾಶೆಯಾಗುವುದು ಬೇಡ. ತಾಳ್ಮೆಯಿಂದಿರು.'

ಸ್ವಲ್ಪ ಹೊತ್ತಿನ ನಂತರ ರೈಲು ಬೊಕಾರೋ ನಿಲ್ದಾಣವನ್ನು ತಲುಪಿತು. ಅದು ಸ್ವಲ್ಪ ದೊಡ್ಡ ನಿಲ್ದಾಣ. ನಾಲ್ಕಾರು ಕಡೆಗಳಿಂದ ರೈಲುಗಳು ಅಲ್ಲಿಗೆ ಬರುತ್ತಿದ್ದವು. ನನ್ನ ಎದೆಬಡಿತ ಸ್ವಲ್ಪ ವೇಗವನ್ನು ಪಡೆದುಕೊಂಡಿತ್ತು. ಎರಡೂ ಕಡೆಯ ಕಿಟಕಿಗಳನ್ನು ಸಂಪೂರ್ಣವಾಗಿ ತೆಗೆದೆ. 'ಧನ' ಅಥವಾ 'ಗೌರವ' ಅಥವಾ 'ಮಿತ್ರ'ನ ಆಗಮನಕ್ಕೆ ತೊಂದರೆಯಾಗಬಾರದಲ್ಲವೇ! ಆದರೆ ಹತ್ತು-ಹದಿನೈದು ನಿಮಿಷಗಳು ನಿಷ್ಫಲವಾಗಿಯೇ ಕಳೆದುಹೋದವು. ಯಾವಾಗ ರೈಲು ಚಲಿಸುವ ಸಮಯ ಸಮೀಪಿಸಿತೋ ಮನಸ್ಸು ಖಿನ್ನವಾಯಿತು. ಒಂದೇ ಒಂದು ನಿಮಿಷ, ಅಷ್ಟೇ. ಯಾವುದೋ ಅಪರಿಚಿತ ವ್ಯಕ್ತಿ ರೈಲಿನ ಕಿಟಕಿಯೊಳಗೆ ಬಗ್ಗಿ ಬಗ್ಗಿ ನೋಡುತ್ತ ನನ್ನ ಕಂಪಾರ್ಟ್ಮೆಂಟ್ ಕಡೆಗೇ ಬರುತ್ತಿದ್ದುದನ್ನು ನೋಡಿ ಮನಸ್ಸು ಮತ್ತೆ ಗರಿಗೆದರಿತು. ವಿಶೇಷವೆಂದರೆ ನನ್ನ ಮುಖವನ್ನು ನೋಡುತ್ತಿದ್ದಂತೆಯೇ ಆತನ ಕಣ್ಣುಗಳು ಆಶ್ಚರ್ಯ ವ್ಯಕ್ತಪಡಿಸಿದ್ದುದನ್ನು ಗಮನಿಸಿದೆ. ಆತ ಬಾಯಿ ತುಂಬಾ ತುಂಬಿಕೊಂಡಿದ್ದ ಕವಳವನ್ನು ಪಕ್ಕದ ಕಸದ ಬುಟ್ಟಿಗೆ ಉಗಿಯುತ್ತ 'ಆಹಾ' ಎಂದು ಉದ್ಗರಿಸಿದ್ದು ನನಗೆ ಕೇಳಿಸಿತ್ತು. ರೈಲು ಚಲಿಸಲಾರಂಭಿಸಿತು. ಆ ವ್ಯಕ್ತಿ ವೇಗವಾಗಿ ಹೆಜ್ಜೆಗಳನ್ನು ಹಾಕುತ್ತ ರೈಲನ್ನು ಏರಿದ್ದ. ಮುಂದಿನ ಕ್ಷಣದಲ್ಲಿಯೇ ಆತ ನಾನು ಕುಳಿತಿದ್ದ 'ಡಬ್ಬಿ'ಯನ್ನು ಪ್ರವೇಶಿಸಿ, ತನ್ನ ಭುಜಗಳೆರಡನ್ನೂ ಒಮ್ಮೆ ಮೇಲಕ್ಕೆ ಹಾರಿಸುತ್ತ ಸಂಭ್ರಮದಿಂದ ಹೇಳಿದ್ದ, 'ಆಹಾ ನನ್ನ ಭಾಗ್ಯ! ಎಲ್ಲವೂ ಕುಶಲವೇ, ಕ್ಷೇಮವೇ? ನನ್ನ ಜೀವನ ಧನ್ಯವಾಯಿತು...''

ಭುಜಕ್ಕೆ ನೇತಾಡುತ್ತಿದ್ದ ಚೀಲವನ್ನು ಸರಿಪಡಿಸಿಕೊಳ್ಳುತ್ತ ಆತ ನನ್ನ ಪಕ್ಕಕ್ಕೆ ಬಂದು ಕುಳಿತ. ಆತನ ಕಣ್ಣುಗಳಲ್ಲಿ ನಾನು ಧನ್ಯತೆಯ ಭಾವವನ್ನು ಗಮನಿಸಿದೆ. ಮತ್ತೆ ಒಂದೆರಡು ಬಾರಿ ಪ್ರಶ್ನಿಸಿದ, ''ಹೇಗಿದ್ದೀರಿ? ಹೇಳಿ... ಇತ್ತೀಚೆಗೆ ಯಾವ ಹೊಸ ಕೃತಿಯನ್ನು ಬರೆಯುತ್ತಿದ್ದೀರಿ? ನಿನ್ನೆಯಷ್ಟೇ ನಿಮ್ಮ ಬಗ್ಗೆ... ನಿನ್ನೆಯಲ್ಲ, ಇವತ್ತು ಬೆಳಿಗ್ಗೆಯಷ್ಟೇ 'ಅಮರ್ ಸಿಂಗ್' ಮತ್ತು ನಾನು ಗಂಟೆಗಟ್ಟಲೆ ನಿಮ್ಮ ಬಗ್ಗೆಯೇ ಮಾತನಾಡುತ್ತಿದ್ದೆವು. ಎಂತಹ ಯೋಗ ನೋಡಿ... ಇವತ್ತೇ ನಿಮ್ಮ ದರ್ಶನ ಭಾಗ್ಯ ನನಗೆ ದೊರಕಿತು! ನಾನೇ ಅದೃಷ್ಟವಂತ! ಅಂದಹಾಗೆ... ಪಾನ್ (ಕವಳ) ಹಾಕುತ್ತೀರಲ್ವಾ?''

ಹೇಳುತ್ತಲೇ ಆತ ತನ್ನ ಚೀಲವನ್ನು ತೆರೆದ. ಆ ಚೀಲದ ಮೇಲೆ ಪ್ರಸಿದ್ಧ ಆಯುರ್ವೇದ ಕಂಪನಿಯೊಂದರ ಶಕ್ತಿವರ್ಧಕ ಔಷಧಿಯ ಹೆಸರಿನ 'ಟ್ರೇಡ್ ಮಾರ್ಕ್' ಇತ್ತು. ಆದರೆ ಅದರ ಒಳಗೆ ಇದ್ದುದು ಬಣ್ಣದ ಲುಂಗಿ, ಬಿಳಿಯ ಪಾಯಿಜಾಮಾ, ಒಂದು ಚಾದರ, ಅದರ ನಡುವೆ ಒಂದು ಡಬ್ಬಿ! ಅದು ಆತನ ಎಲೆಯಡಿಕೆ ಡಬ್ಬಿಯಾಗಿತ್ತು. ಅದರ ಮೇಲೆಯೂ ಔಷಧಿ ಸಂಸ್ಥೆಯೊಂದರ ಹೆಸರು ಇತ್ತು; ವಿಟಮಿನ್ 'ಬಿ' ಬಾಟಲಿಯಲ್ಲಿ ಜರ್ದಾವನ್ನು ಇಟ್ಟುಕೊಂಡಿದ್ದ. ಆತ 'ಪಾನ್' ಸಿದ್ಧಪಡಿಸತೊಡಗಿದ ಮತ್ತು ನಾನು ಆತನನ್ನು ಹಾಗೂ ಆತ ಉಲ್ಲೇಖಿಸಿದ 'ಅಮರ್ ಸಿಂಗ್'ನನ್ನು